## ವ್ಯವಹಾರಿಕವಾಗಿಯೂ ಗೋಮಾತೆ ಬದುಕಿಗೆ ಆಧಾರ: ಡಾ.ಹೆಗ್ಗಡೆ

# ಶ್ರೀಕೃಷ್ಣ ಮಿಲ್ಕ್‌ನ ನವೀಕೃತ ಹಾಲಿನ ಉತ್ಪನ್ನ ಘಟಕ ಉದ್ಘಾಟನೆ



ಕಿರವತ್ತಿಯ ಹೊಸಳ್ಳಿಯಲ್ಲಿ ಶುಕ್ರವಾರ ಸಂಜೆ ಶ್ರೀ ಕೃಷ್ಣ ಮಿಲ್ಕ್ಸ್ ನ ನವೀಕೃತ ಹಾಗೂ ಆಧುನೀಕೃತ ಹಾಲಿನ ಉತ್ಪನ್ನ ಘಟಕವನ್ನು ಡಾ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು.

ಯಲ್ಲಾಪುರ : ಕೇವಲ ಧಾರ್ಮಿಕವಾಗಿ ಮಾತ್ರವಲ್ಲದೇ, ವ್ಯವಹಾರಿಕವಾಗಿಯೂ ಗೋಮಾತೆ ಬದುಕಿನ ಆಧಾರವಾಗಿದ್ದಾಳೆ. ನಾವು ಬೇರೆ, ಬೇರೆ ಬೆಳೆ ಬೆಳೆದರೆ ಬೆಳೆಗಾಗಿ ಐದಾರು ತಿಂಗಳು ಕಾಯಬೇಕು. ಆದರೆ ಗೋ ಮಾತೆಯನ್ನು ಸಾಕಿದರೆ ಮರುದಿನವೇ ಉತ್ಪನ್ನ ಸಿಗುತ್ತದೆ. ರೈತರಿಂದ ಹಾಲು ಖರೀದಿಸಿ, ಅವುಗಳ ಉತ್ಪನ್ನ ತಯಾರಿಕೆಯಿಂದ ಶ್ರೀ ಕೃಷ್ಣ ಮಿಲ್ಕ್ಸ್ ನವರು ನೂರಾರು ಕುಟುಂಬಗಳಿಗೆ ಆಧಾರವಾಗಿದ್ದಾರೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಹೇಳಿದರು.

ಅವರು ತಾಲೂಕಿನ ಕಿರವತ್ತಿಯ ಹೊಸಳ್ಳಿಯಲ್ಲಿ ಶುಕ್ರವಾರ ಸಂಜೆ ಶ್ರೀ ಕೃಷ್ಣ ಮಿಲ್ಕ್ಸ್ ನ ನವೀಕೃತ ಹಾಗೂ ಆಧುನೀಕೃತ ಹಾಲಿನ ಉತ್ಪನ್ನ ಘಟಕ ಉದ್ಘಾಟಿಸಿ ಮಾತನಾಡಿದರು. ಸಾಧನೆಯ ಮೆಟ್ಟಿಲು ಶಿಸ್ತಿನ ತಳಹದಿಯಲ್ಲಿದೆ. ನಾವು ಮಾಡುವ ಕಾಯಕದಲ್ಲಿ ಶಿಸ್ತು, ಶ್ರದ್ಧೆ, ಭಕ್ತಿ ಇಟ್ಟುಕೊಂಡರೆ ಜೀವನದಲ್ಲಿ ಸಾಧನೆ ಮಾಡುವುದರಲ್ಲಿ ಸಂಶಯವಿಲ್ಲ ಎಂಬುವದಕ್ಕೆ ಪೈ ಸಹೋದರರು ನಿದರ್ಶನವಾಗಿದ್ದಾರೆ ಎಂದ ಅವರು ಅದರಲ್ಲೂ ಸರ್ಕಾರಕ್ಕಿಂತಲೂ ರೈತರ ಹಾಲಿಗೆ 2 ರೂ.ಗಳ ಹೆಚ್ಚಿಗೆ ನೀಡುತ್ತಿರುವುದು ನಿಜಕ್ಕೂ ಅಭಿನಂದನೀಯ. ಇಲ್ಲಿನ ತಯಾರಿಕೆಯ ಶಿಸ್ತು, ಸ್ವಚ್ಛತೆ ನೋಡಿದರೆ ಇಲ್ಲಿನ ಉತ್ಪನ್ನ ವಿಶ್ವಮಟ್ಟದ್ದಾಗಿದೆ ಎಂದು ಹೇಳಬಹುದು ಎಂದರು.

ಹೊಸ ರುಚಿಯ ಸೋನ್ ಪಾಪಡಿ ಸಿಹಿ ಲೋಕಾರ್ಪಣೆ ಗೊಳಿಸಿದ ದಕ್ಷಿಣ ಕನ್ನಡ ಸಂಸದ ನಳಿನ ಕುಮಾರ ಕಟೀಲು ಮಾತನಾಡಿ, ಗ್ರಾಮೀಣ ಪ್ರದೇಶದ ಸಾಮಾನ್ಯರಲ್ಲೂ ಉದ್ಯಮಶೀಲತೆ ಬೆಳೆಸಬಹುದು ಎಂಬುದನ್ನು ಶ್ರೀ ಕೃಷ್ಣ ಮಿಲ್ಕ್ಸ್ ತೋರಿಸಿಕೊಟ್ಟಿದ್ದು, ಜನರ ಸಹಭಾಗಿತ್ವದಲ್ಲಿ ಉದ್ಯಮ ಪ್ರಾರಂಭಿಸುವ ಮೂಲಕ ರಾಷ್ಟ್ರೋತ್ಥಾನಕ್ಕೆ ತನ್ನದೇ ಆದ ಕೊಡುಗೆ ನೀಡಿದೆ ಎಂದರು.

ಶಾಸಕ ಶಿವರಾಮ ಹೆಬ್ಬಾರ ಮಾತನಾಡಿ, ಔದ್ಯೋಗಿಕ ಕ್ಷೇತ್ರದಲ್ಲಿ ಗಟ್ಟಿಯಾಗಿ ನಿಲ್ಲಬೇಕಾದರೆ ಆ ಪ್ರದೇಶದ ಜನರ ವಿಶ್ವಾಸ ಗಳಿಸುವುದು ಅಗತ್ಯವಾಗಿದೆ. ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿದರೆ, ಎತ್ತರಕ್ಕೆ ಬೆಳೆಯಲು ಸಾಧ್ಯ ಎಂಬುದನ್ನು ಶ್ರೀ ಕೃಷ್ಣ ಮಿಲ್ಕ್ಸ್ ತೋರಿಸಿಕೊಟ್ಟಿದೆ, ಮುಂದಿನ ದಿನಗಳಲ್ಲಿಯೂ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡಿ ಉದ್ಯೋಗ ನೀಡುವಂತಾಗಲಿ ಎಂದರು.

ಹುಬ್ಬಳ್ಳಿ 'ಇಸ್ಕಾನ್' ಹಾಗೂ ಅಕ್ಷಯ ಪಾತ್ರ ಯೋಜನೆ ಅಧ್ಯಕ್ಷ ರಾಜೀವ ಲೋಚನ ದಾಸ, ಆಕ್ಸಿಸ್ ಬ್ಯಾಂಕ್ ನ ಹಿರಿಯ ಅಧಿಕಾರಿ ವಿನೋದ ಚೌಧರಿ ಮಾತನಾಡಿದರು.

ಹೈನುಗಾರಿಕೆ ಉದ್ಯಮದ ಭೀಷ್ಮ ಪುಣೆಯ ವಿನಾಯಕ ಹುಲಮುಳೆ ಹಾಗೂ ಯೋಜನೆಯ ಯಶಸ್ಸಿಗೆ ಕಾರಣರಾದ ಎ.ಪಿ.ಸಿನ್ಹಾ, ಎನ್.ವಿ.ಜೋಶಿ, ಜೋಜಿ ಅಬ್ರಾಹಂ, ವಿಶ್ವನಾಥ ಉಡುಪಿ, ಸದಾನಂದ ನಾಯಕ, ಗಿರೀಶ ಕಾನುಭಾಗ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಶ್ರೀ ಕೃಷ್ಣ ಮಿಲ್ಕ್ಸ್ ಸಮೂಹ ಸಂಸ್ಥೆಯ ಪ್ರದೀಪ್, ಪೈ, ಜಗದೀಶ್ ಪೈ, ಹನುಮಂತ ( ಮತ್ತು) ಪೈ, ದಿನೇಶ ಪೈ, ಸತೀಶ್ ಪೈ,ಜೆ.ಎಸ್. ಪೈ ಉಪಸ್ಥಿತರಿದ್ದರು.

ವಾಣಿ ಹೆಗಡೆ ಸ್ವಾಗತಿಸಿದರು, ಗಣೇಶ ಪ್ರಸಾದ ಕಾಮತ್ ಸ್ವಾಗತಿಸಿದರು, ಡಾ. ಆರ್. ಜಿ.ಹೆಗಡೆ ಹಾಗೂ ಪ್ರಸನ್ನ ಪ್ರಭು ನಿರೂಪಿಸಿದರು, ಕೆ. ಸುನೀಲ್ ಕಿಣಿ ವಂದಿಸಿದರು.